ತೋಟಗಾರಿಕೆ ಇಲಾಖೆ ದಿನಗೂಲಿ ನೌಕರರ ಬಗ್ಗೆ

೪೯೯. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).-- ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ತೋಟಗಾರಿಕೆ ಇಲಾಖೆಯಲ್ಲಿರುವ ನೌಕರರೆಷ್ಟು ? ಅದರಲ್ಲಿ ಹಂಗಾಮಿ ನೌಕರರೆಷ್ಟು ?

ಆ) ಈ ಹಂಗಾಮಿ ನೌಕರರ ದಿನಗೂಲಿ ಎಷ್ಟಿದೆ ?

ಇ) ವರ್ಷದಲ್ಲಿ ೨೪೦ ದಿನ ಕೆಲಸ ಮಾಡಿರುವ ಕಾರ್ಮಿಕರ ಕೆಲಸವನ್ನು ಖಾಯಂ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಈ) ಅವರು ಕೂಲಿ ಸಂಬಳವನ್ನು ಹೆಚ್ಚಿಸಲು ರಜಾ ಮತ್ತಿತರ ಸೌಲಭ್ಯ ನೀಡಲು ಸರ್ಕಾರ ದವರು ಯೋಚಿಸಿದ್ದಾರೆಯೇ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).--

ಅ)

ವರ್ಗ	ಒಟ್ಟು ನೌಕರರು	ಅದರಲ್ಲಿ ಹಂಗಾಮಿ ನೌಕರರು
ಸಿ	೧,೪೨೬	೪೦
ಡಿ	೫,೯೯೫	೧,೩೩೧

ಆ) ರೂ. ೧೫.೦೦ ಸಿ ವರ್ಗದವರಿಗೆ

ರೂ. ೧೨.೦೦ ಡಿ ವರ್ಗದವರಿಗೆ

ಇ) ಸರ್ಕಾರಿ ಆದೇಶದ ಸಂಖ್ಯೆ ; ಎ. ಎ. ಹೆಚ್. ೧೭೯ ಎ ಹೆಚ್. ಇ. ೮೧ (೧) ದಿನಾಂಕ ೧೧-೭-೧೯೮೬ ಮೇರೆಗೆ ದಿನಾಂಕ ೧-೧೧-೧೯೮೪ ರವರೆಗೆ ಸತತವಾಗಿ ೫ ವರ್ಷಗಳ ಸೇವೆ ಸಲ್ಲಿಸಿದ ಈ ವರ್ಗದ ದಿನಗೂಲಿ ನೌಕರರನ್ನು ತಿಂಗಳಿಗೆ ರೂ. ೩೦೦.೦೦ ರಂತೆ ಮಾಸಿಕ ವೇತನ ನೌಕರರನ್ನಾಗಿ ಪರಿವರ್ತಿಸಲಾಗಿದೆ.

ಈ) ಸಿ ವರ್ಗದ ನೌಕರರಿಗೆ ಈ ಹಿಂದೆ ದಿನ ಒಂದಕ್ಕೆ ರೂ ೧೨.೦೦ ನ್ನು ಕೊಡಲಾಗುತ್ತಿತ್ತು. ಸರ್ಕಾರದ ಆದೇಶದ ಸಂಖ್ಯೆ ಎ. ಎ. ಹೆಚ್. ೧೧೧ ಎ. ಹೆಚ್. ಇ. ೮೪, ದಿನಾಂಕ ೧೫-೬-೧೯೮೬ರ ಪ್ರಕಾರ ಇವರಿಗೆ ದಿನಾಂಕ ೧೮-೬-೧೯೮೬ ರಿಂದ ದಿನ ಒಂದಕ್ಕೆ ರೂ. ೧೫.೦೦ ರಂತೆ ಕೊಡಲಾಗುತ್ತಿದೆ.

ಡಿ ವರ್ಗದ ನೌಕರರಿಗೆ ದಿನ ಒಂದಕ್ಕೆ ರೂ. ೯.೫೦ ರಂತೆ ಕೊಡಲಾಗುತ್ತಿತ್ತು. ಸರ್ಕಾರಿ ಪತ್ರದ ಸಂಖ್ಯೆ ಎ. ಎ. ಹೆಚ್, ೨೯೬ ಎ. ಹೆಚ್. ಇ. ೮೫, ದಿನಾಂಕ ೧೮/೧೩-೫-೧೯೮೬ರ ಪ್ರಕಾರ ಮತ್ತು ತೋಟಗಾರಿಕೆ ನಿರ್ದೇಶಕರ ಕಛೇರಿ ಆದೇಶದ ಸಂಖ್ಯೆ ಸಿಬ್ಬಂದಿ ೬-೧-೮೫-೮೬ ದಿನಾಂಕ ೯-೭-೧೯೮೬ರ ಮೇರೆಗೆ ದಿನ ಒಂದಕ್ಕೆ ರೂ. ೧೨-೦೦ ರಂತೆ ಕೊಡಲಾಗುತ್ತಿದೆ.

೧-೧೧-೧೯೮೪ ರಂದು ಇದ್ದ ಡಿ ವರ್ಗದ ಹಂಗಾಮಿ ನೌಕರರನ್ನು ಸರ್ಕಾರಿ ಆದೇಶದ ಸಂಖ್ಯೆ. ಎ. ಎ. ಹೆಚ್. ೧೭೯ ಎ ಹೆಚ್. ಇ. ೮೧ (I) ದಿನಾಂಕ ೧೧-೭-೧೯೮೬ರ ಪ್ರಕಾರ ಸತತವಾಗಿ ೫ ವರ್ಷಗಳ ಸೇವೆ ಸಲ್ಲಿಸಿದ ಕೂಡಲೆ ಮಾಸಿಕ ವೇತನ ನೌಕರರನ್ನಾಗಿ ಪರಿವರ್ತಿಸಿ ಅವರಿಗೆ ರಜಾ ಮಂತ್ರಿತರ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಕಲಘಟಗಿಯಲ್ಲಿ ಮಹಿಳಾ ತಾಂತ್ರಿಕ ಶಿಕ್ಷಣದ ಕೇಂದ್ರದ ಸ್ಥಾಪನೆ ಬಗ್ಗೆ

೫೦೧. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).-- ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕಲಘಟಗಿಯಲ್ಲಿ ಸರ್ಕಾರಿ ಮಹಿಳಾ ತಾಂತ್ರಿಕ ಶಿಕ್ಷಣ ಕೇಂದ್ರವನ್ನು ಸ್ಥಾಪಿಸುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು .--

ಅ) ಬಂದಿಲ್ಲ. ತಾಂತ್ರಿಕ ಶಿಕ್ಷಣ ಸಂಸ್ಥೆ ಸ್ಥಾಪಿಸಲು ಸರ್ಕಾರದ ಉದ್ದೇಶವಿಲ್ಲ.